## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 463/2023

**ಸಾಕ್ಷಿಯನ್ನು ದಿಃ 11.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಎಸ್. ರಾಧಾ | ಸಿಡಬ್ಲ್ಯೂ:18 | ಪಿಡಬ್ಲ್ಯೂ:7 |
| ಗಂಡನ ಹೆಸರು | ಲೇಟ್ ಹೆಚ್.ಎ ಗಿರೀಶ್ | | |
| ವಯಸ್ಸು | 55 ವರ್ಷ | | |
| ಕೆಲಸ | ಪಿ.ಎಸ್.ಐ ಹುಣಸೂರು<br>ಗ್ರಾಮಾಂತರ ಪೊಲೀಸ್ ಠಾಣೆ | | |
| ವಾಸಸ್ಥಳ | ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 07.06.2021 ರಿಂದ ದಿಃ 31.01.2023 ವರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿದ್ದು, ಪುನಃ ದಿಃ 17.08.2024 ರಿಂದ ಇಲ್ಲಿಯವರೆಗೆ ಅದೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 15.01.2023 ರಂದು ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಪಿರ್ಯಾದಿ ಮುಬಾರಕ್ ಪಾಷಾಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಕಂಪ್ಯೂಟರ್ ಮುದ್ರಿತ್ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 16.2023 ರಲ್ಲಿ ಕಲಂ 279, 337, 304 ಎ ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಿಪಿ. 1 ರ ದೂರಿನಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ

ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ. 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 18(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣವು ಘೋರ ಪ್ರಕರಣವಾದ ಕಾರಣ ಕಡತವನ್ನು ಚಾಸಾ 19 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ.ಎ.ಎನ್ ವಕೀಲರಿಂದಃ</u>**

ನಿಪಿ. 1 ದೂರನ್ನು ಕಂಪ್ಯೂಟರ್ ಮುದ್ರಿತ ಕೊಟ್ಟಿದ್ದು, ಅದನ್ನು ತಯಾರಿಸಲು ಯಾರು ಹೇಳಿದರು ಎಂಬ ಬಗ್ಗೆ ತಿಳಿಸಿದದ್ದರಾ ಎಂದರೆ ಸಾಕ್ಷಿ ಠಾಣೆಗೆ ಬರುವ ಮೊದಲೆ ಅದನ್ನು ತಯಾರಿಸಿಕೊಂಡ ಬಂದಿದ್ದರಿಂದ, ಕೇಳಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಅವರ ಜೊತೆಯಲ್ಲಿ ಇದ್ದವರು ಪಿರ್ಯಾದಿದಾರರು ವಿಷಯ ತಿಳಿಸಿದ ಮೇರೆಗೆ ದೂರನ್ನು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ. ಪಿರ್ಯಾದಿದಾರರ ಜೊತೆ ಇಬ್ಬರು ಬಂದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಪಿರ್ಯಾದಿದಾರರು ಅಪಘಾತ ಆದ ಸಮಯದಲ್ಲಿ 8 ವರ್ಷದವ ಎಂದರೆ ಸರಿ. ದೂರನ್ನು ಸ್ವೀಕರಿಸುವ ಸಮಯದಲ್ಲಿ ಪಿರ್ಯಾದಿದಾರನ ವಯಸ್ಸಿನ ದೃಡೀಕರಣದ ದಾಖಲೆಯನ್ನು ತೆಗೆದುಕೊಂಡಿಲ್ಲ. ದೂರಿನ ಜೊತೆ ಆತನ ತಂದೆ ತಾಯಿ ಹೇಳಿಕೆ ಪಡೆದುಕೊಂಡಿಲ್ಲ. ಆತನನ್ನು ಯಾರ್ಯಾರು ಉಪಚರಿಸಿದರು ಎಂಬ ಬಗ್ಗೆ ದೂರಿನಲ್ಲಿ ನಮೂದು ಮಾಡಿರಲಿಲ್ಲ. ಆತ ಆಟೋದ ಯಾವ ಭಾಗದಲ್ಲಿ ಕುತಿಳಿದ್ದ ಅಥವಾ ನಿಂತಿದ್ದ ಎಂದು ದೂರಿನಲ್ಲಿ ನಮೂದಿಸಿಲ್ಲ. ಸಾಕ್ಷಿ ಪುನಃ ಡ್ರೈವರ್ ನ ಪಕ್ಕದಲ್ಲಿ ಕುಳಿತಿದ್ದ ಎಂದು ನಮೂದಿಸಿದ್ದೇನೆ ಎನ್ನುತ್ತಾರೆ. ಮೃತನ ಕುಟುಂಬದಕ್ಕೆ ಪರಿಹಾರ ಸಿಗಲಿ ಎಂದು ಊರಿನ ಹಿರಿಯ ಮಾತು ಕೇಳಿ ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಕೇಸ್ ಅನ್ನು ದಾಖಲಿಸಿಕೊಂಡು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಚಾಸಾ 1 ರವರು ಬರೆಸಿದ್ದಲ್ಲ, ಊರಿನ ಯಾರೋ ಮುಖಂಡರು ಬರೆಸಿದ್ದನ್ನು ತಂದು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯ ಯಾವುದೆ ತಪ್ಪಿಲ್ಲದಿದ್ದರೂ ಆತನ ಮೇಲೆ ಸುಳ್ಳು ಕೇಸ್ ಅನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.